ಈ ದಿನ ದಿನಾಂಕಃ 16.08.2025 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**<u>ಪಾಟೀಸವಾಲು ಆರೋಪಿ ಪರ ವಕೀಲರಿಂದಃ</u>**

ಆರೋಪಿ 2020 ನೇ ಸಾಲಿನಿಂದ ನನಗೆ ಪರಿಚಯಸ್ಥ. ಬಸವಪಟ್ಟಣದಲ್ಲಿ ನಾನು ವಾಸ ಮಾಡುತ್ತಿದ್ದೇನೆ. ಆರೋಪಿ ಹೊನ್ನಾಳಿಯಲ್ಲಿ ವಾಸ ಮಾಡುತ್ತಿದ್ದಾರೆ. ಆರೋಪಿಯ ಶಿವಮೊಗ್ಗ ವಿಳಾಸಕ್ಕೆ ನೋಟಿಸ್ ನ್ನು ಕಳುಹಿಸಿರುತ್ತೇನೆ. 2023-24 ನೇ ಸಾಲಿನಿಂದ ಆರೋಪಿ ಶಿವಮೊಗದಲ್ಲಿ ವಾಸ ಮಾಡುತ್ತಿದ್ದಾರೆ. ಜನವರಿ 2021 ನೇ ಸಾಲಿನಲ್ಲಿ ಆರೋಪಿ ನನ್ನ ಬಳಿ ಸಾಲ ಕೇಳಿರುತ್ತಾರೆ. ಸಾಲ ಕೇಳಲು ಆರೋಪಿ ಒಬ್ಬರೇ ಬಂದಿ ರುತ್ತಾರೆ. ನಮ್ಮ ಮನೆಯಲ್ಲಿ ನನ್ನ ತಾಯಿ, ಹೆಂಡತಿ ಹಾಗೂ ಇಬ್ಬರು ಮಕ್ಕಳಿದ್ದಾರೆ. ಆರೋಪಿ ಹೊನ್ನಾಳಿಯ ಒಂದು ಹೊಟೇಲ್ ನಲ್ಲಿ ನನ್ನ ಬಳಿ ಸಾಲ ಪಡೆದು ಹೋಗಿರುತ್ತಾರೆ. ಪ್ರಮಾಣ ಪತ್ರದಲ್ಲಿ ಆರೋಪಿ ಹೊನ್ನಾಳಿಯ ಹೊಟೇಲ್ ನಲ್ಲಿ ಸಾಲ ಪಡೆದಿರುವುದಾಗಿ ನಮೂದಿಸಿರುವುದಿಲ್ಲ ಎಂದರೆ ಸರಿ. ವಕೀಲರಿಗೆ ನೋಟಿಸ್ ನೀಡುವ ಕಾಲಕ್ಕೆ ಸದರಿ ಸಂಗತಿಯನ್ನು ತಿಳಿಸಿರುವುದಿಲ್ಲ.

2. ಆರೋಪಿ ಜನವರಿ 2021ರ ಪೂರ್ವದಲ್ಲಿ ಸಾಲವನ್ನು ಕೇಳಿದ್ದು ಜನವರಿ ತಿಂಗಳಿನಲ್ಲಿ ಸಾಲ ನೀಡಿರುತ್ತೇನೆ. ಆರೋಪಿ ಮೊದಲನೇ ಬಾರಿ ಸಾಲ ಯಾವಾಗ ಕೇಳಿರುತ್ತಾರೆಂದು ನನಗೆ ನೆನಪಿಲ್ಲ. ಆರೋಪಿ ವ್ಯಾಪಾರಕ್ಕಾಗಿ ಸಾಲ ಪಡೆಯುತ್ತಿರುವುದಾಗಿ ತಿಳಿಸಿ 2ವರ್ಷದೊಳಗೆ ಹಿಂದಿರುಗಿಸುವುದಾಗಿ ತಿಳಿಸಿರುತ್ತಾನೆ. 2023 ರ ಜನವರಿ ಅಥವಾ ಪೆಬ್ರವರಿ ತಿಂಗಳಿನಲ್ಲಿ ಆಸರೋಪಿಯ ಬಳಿ ಹೋಗಿ ಸಾಲ ಹಿಂದಿರುಗಿಸವಂತೆ ಕೇಳಿರುತ್ತೇನೆ. ಆರೋಪಿ ಸಾಲ ಹಿಂದಿರುಗಿಸಲು ಸಮಯವಕಾಶ ಕೋರಿದ್ದು ಬಳಿಕ ನಾನು 3-4 ಬಾರಿ ಸಾಲ ಹಿಂದಿರುಗಿಸುವಂತೆ ಕೇಳಿಕೊಂಡಿರುತ್ತೇನೆ.

3. ನನ್ನ ಹಾಗೂ ಆರೋಪಿಯ ನಡುವೆ ಯಾವುದೇ ಲಿಖಿತ ಕರಾರು ಆಗಿರುವುದಿಲ್ಲ. ಕೇವಲ ಮೌಖಿಕವಾಗಿ ಆರೋಪಿ ಸಾಲ ಹಿಂದಿರುಗಿಸುವುದಾಗಿ ತಿಳಿಸಿರುತ್ತಾರೆ. ಕೊನೆಯ ಬಾರಿ ಏಪ್ರಿಲ್ 2023 ನಲ್ಲಿ ಸಾಲ ಹಿಂದಿರುಗಿಸುವಂತೆ ನಾನೇ ಖುದ್ದು ಕೇಳಿರುತ್ತೇನೆ. ಆರ್ ಎಂ ಎಲ್ ನಗರ

ಶಿವಮೊಗ್ಗದಲ್ಲಿ ಅರೋಪಿಯ ಬಳಿ ಕೊನೆಯ ಬಾರಿ ಸಾಲ ಹಿಂದಿರುಗಿಸುವಂತೆ ಕೇಳಿಕೊಂಡಿರುತ್ತೇನೆ. ಆರೋಪಿಯ ಮಾವನಿಗೆ ಸಾಲದ ವಿಚಾರವನ್ನು ತಿಳಿಸಿರುವುದಿಲ್ಲ.

4. 2023 ರ ಮೇ ತಿಂಗಳಿನಲ್ಲಿ ಆರೋಪಿ ಚೆಕ್ ಸಂ. 685302 ನೀಡಿರುತ್ತಾರೆ. ದಿಃ 25.07.2023 ರ ಚೆಕ್ ನ್ನು ದಿಃ 25.09.2023 ರಂದು ನಗಧೀಕರಣಕ್ಕಾಗಿ ಸಲ್ಲಿಸಿರುತ್ತೇನೆ. ವಕೀಲರ ಮೂಲಕ ಆರೋಪಿಗೆ ಚೆಕ್ ಸಂಬಂಧ ನೋಟಿಸ್ ನ್ನು ಕಳುಹಿಸಿರುತ್ತೇನೆ. ದಿಃ 05.10.2023 ರಂದು ವಕೀಲರನ್ನು ಬೇಟಿ ಮಾಡಿರುತ್ತೇನೆ. 1,50,000/- ಹಣವನ್ನು ನಗದು ರೂಪದಲ್ಲಿ ಆರೋಪಿಗೆ ನೀಡಿರುತ್ತೇನೆ. ನಾನು ವ್ಯವಸಾಯ ಕಸುಬನ್ನು ಮಾಡುತ್ತೇನೆ. ಅಡಿಕೆ ಮಾರಿ ಬಂದ ಹಣದಿಂದ ಆರೋಪಿಗೆ 1,50,000/- ಹಣವನ್ನು ಒಟ್ಟಿಗೆ ನೀಡಿರುತ್ತೇನೆ. ನನ್ನ ಆದಾಯದ ಕುರಿತು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

5. ನಿಪಿ 1 ರಲ್ಲಿ ಕಾಣುವ ಸಹಿ ಆರೋಪಿಯದು. ನಿಪಿ 1 ರಲ್ಲಿ ಕಾಣುವ ಸಹಿಗೂ ನಿಪಿ 5 ರಲ್ಲಿ ಕಾಣುವ ಸಹಿಗೂ ವ್ಯತಾಸ ಇವೆ ಎಂದರೆ ಸಾಕ್ಷಿ ಸ್ವಲ್ಪ ಹೆಚ್ಚಿರಬಹುದೆಂದು ನುಡಿಯುತ್ತಾರೆ. ನಿಪಿ1 ರಲ್ಲಿ ನಮೂದಿಸಿರುವ ದಿನಾಂಕದ ಬರವಣಿಗೆ ಆರೋಪಿ ಮಾಡಿರುವುದಲ್ಲ ಎಂದರೆ ಸರಿಯಲ್ಲ. ನಾನು ಹೋಗವ ಪೂರ್ವಲ್ಲಿ ಆರೊಪಿ ಚೆಕ್ ನ್ನು ಬರೆದು ತಯಾರಿಸಿ ಇಟ್ಟಿದ್ದರು ಎಂದರೆ ಸರಿ. ಆರೋಪಿಯ ಬಳಿ ಚೆಕ್ ಪಡೆಯುವ ಪೂರ್ವದಲ್ಲಿ ನಾನು ಆರೋಪಿಗೆ ಈ ದಿನ ಬರುತ್ತೇನೆಂದು ತಿಳಿಸಿರುವುದಿಲ್ಲ. ನಿಪಿ 1 ರಲ್ಲಿ ನಮೂದಿಸಿರುವ ಹೆಸರು ಹಾಗೂ ಹಣ ಆರೋಪಿಯ ಬರವಣಿಗೆ ಅಲ್ಲ ಎಂದರೆ ಸರಿಯಲ್ಲ. ಆರೋಪಿ ಚೆಕ್ ನ್ನು ನೀಡಿರುವುದಿಲ್ಲ. ನಿಪಿ 1 ರಲ್ಲಿ ನನ್ನ ಹೆಸರು, ದಿನಾಂಕ ಹಾಗು ಮೊತ್ತವನ್ನು ನಮೂದಿಸಿ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ದಿಃ 25.09.2023 ರಂದು ಬ್ಯಾಂಕ್ ನಿಂದ ಹಿಂಬರಹ ಪಡೆದಿರುತ್ತೇನೆ.

ಮುಂದುವರೆದ ಪಾಟೀಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.